ತಡೆಯಾಜ್ಞೆ ಮಾಡಿದ್ದರೆ ನಾವು ಏನು ಮಾಡಲು ಬರುವುದಿಲ್ಲ. ನಮ್ಮ ಕಛೇರಿಯ ಆದೇಶದ ಅನುಸಾರ ಆ ರೀತಿ ಮಾಡಿದ್ದರೆ ನಾವು ಏನು ಮಾಡಲು ಬರುವುದಿಲ್ಲ. ನಮ್ಮ ಕಛೇರಿಯ ಆದೇಶದ ಅನುಸಾರ ಆ ರೀತಿ ಮಾಡಿದ್ದರೆ ಅದರ ಬಗ್ಗೆ ಮಾಹಿತಿಯನ್ನು ತರಿಸಿ ನನ್ನ ಕೈಯಲ್ಲಿ ಏನು ಮಾಡಲು ಸಾಧ್ಯವಿದೆಯೋ ಅಷ್ಟನ್ನು ಮಾಡಲು ಪ್ರಯತ್ನ ಮಾಡುತ್ತೇನೆ. ನಾವು ಇದರಲ್ಲಿ ಏನೂ ಮಾಡಲು ಬರುವುದಿಲ್ಲ. ಇದು ಕೋರ್ಟಿನ ಕೇಸು. ನಾವು ಮಧ್ಯ ಪ್ರವೇಶ ಮಾಡಲು ಬರುವುದಿಲ್ಲ. ತಾವು ಕೋರ್ಟಿಗೆ ಅಫೀಲ್ ಹೋಗಬಹುದು. ಅವರಿಗೆ ಅನ್ಯಾಯವಾಗಿದ್ದರೆ ತಾವು ಕೋರ್ಟಿಗೆ ಅಫೀಲ್ ಹೋಗಬೇಕಾಗುತ್ತದೆ. ಕೋರ್ಟ್ ಕೇಸ್ ಇದ್ದರೆ ನಾವು ಏನೂ ಮಾಡಲು ಆಗುವುದಿಲ್ಲ.

ಘ) ಗಂಗಾ ಕಲ್ಯಾಣ ಯೋಜನೆಯಲ್ಲಿ ಸಬ್‌ಮರ್ಸಿಬಲ್ ಪಂಪ್ ಸೆಟ್‌ಗಳ ಖರೀದಿ.

ಶ್ರೀ ಪಿ. ಮುನಿಯಪ್ಪ (ಶಿಡ್ಲಿಘಟ್ಟ) : ಮಾನ್ಯ ಉಪಾಧ್ಯಕ್ಷರೆ, ಪರಿಶಿಷ್ಟಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದವರು ಗಂಗಾಕಲ್ಯಾಣ ಯೋಜನೆಯಲ್ಲಿ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ಕೆ.ಎಸ್.ಎಂ. ಎಂ.ಆರಿ. ಮೂಲಕ ಖರೀದಿ ಮಾಡಲು ತೀರ್ಮಾನ ತೆಗೆದುಕೊಂಡಿತ್ತು. ಆದರೆ ಅದು ಸರ್ಕಾರದ ಕಾನೂನಿಗೆ ವಿರುದ್ಧವಾಗಿದೆಯೆಂಬ ಅಂಶವನ್ನು ಮೇಲ್ಮನೆಯಲ್ಲಿ ಅವರ ಗಮನಕ್ಕೆ ತಂದಾಗ ಅದನ್ನು ರದ್ದು ಮಾಡಲಾಗಿದೆ. ಇದರ ಬಗ್ಗೆ ಮೇಲ್ಮನೆಯಲ್ಲಿ ರಚನೆಯಾಗಿದ್ದ ಸದನದ ಸಮಿತಿಯವರು ಇದರ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಆ ರೀತಿ ಕೊಟ್ಟ ವರದಿಯನ್ನು ನಿರ್ಲಕ್ಷ್ಯ ಮಾಡಿ ಬೇರೆ ರೀತಿಯಲ್ಲಿ ಸರ್ಕಾರ ಆಜ್ಞೆ ಮಾಡಿರುವುದು ನಿಜವೇ? ಆ ನಿಗಮದಲ್ಲಿ ಬಹಳ ಕಾಲದಿಂದ ಇರುವ ಇಬ್ಬರು ಸಿ.ಎಂ.ಡಿ.ರವರು ಈ ಎಲ್ಲಾ ಅವ್ಯವಹಾರಗಳಿಗೆ ಕಾರಣಕರ್ತರಾಗಿದ್ದಾರೆಂದು ಸದನದ ಸಮಿತಿಯವರು ನಿರ್ದಿಷ್ಟವಾಗಿ ಹೇಳಿ ವರದಿಯನ್ನು ಕೊಟ್ಟಿದ್ದಾರೆ. ಈ ರೀತಿ ಇದ್ದರೂ ಸಹ ಆ ಅಧಿಕಾರಿಯನ್ನು ಅಲ್ಲೇ ಮುಂದುವರೆಸಿದ್ದೇ ಆದರೆ ಆ ನಿಗಮದ ಉದ್ದೇಶಗಳೇನಿದೆ ಅದು ವಿಫಲವಾಗುವ ಸಾಧ್ಯತೆಗಳಿದೆ. ಇತ್ತೀಚೆಗೆ ಅಲ್ಲಿ ಆಗಿರುವ ಎಲ್ಲಾ ನಡವಳಿಕೆಗಳನ್ನು ಸದನದ ಸಮಿತಿಯವರು ತಮ್ಮ ವರದಿಯಲ್ಲಿ ಉಲ್ಲೇಖ ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆ ವರದಿಯನ್ನು ಸರ್ಕಾರ ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು ಮತ್ತು ಇದರಲ್ಲಿ ಯಾರ್ಯಾರು ಜವಾಬ್ದಾರರಾಗಿದ್ದಾರೆ ಅವರ ವಿರುದ್ಧ ಸರ್ಕಾರ ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದ ಬಗ್ಗೆ ಮೇಲ್ಮನೆಯಲ್ಲಿ ಕೂಲಂಕುಷವಾಗಿ ಚರ್ಚೆಯಾಗಿದೆ. ಅದರ ವರದಿ ಸಹ ಬಂದಿದೆ. ವರದಿಯ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಮೇಲ್ಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ. ತಮಗೆ ಇನ್ನೂ ಸಮಾಧಾನಕರವಾದ ಉತ್ತರ ಬೇಕಾಗಿದ್ದರೆ ಮಾನ್ಯ ಕೃಷ್ಣರೆಡ್ಡಿಯವರಿಂದ ತರಿಸಿ ಒದಗಿಸುತ್ತೇನೆ.

ಚ) 4-4-99ರಂದು ಬೆಂಗಳೂರಿನಲ್ಲಿ ನಡೆಯುವ ವಿಶ್ವಕಪ್ ಕ್ರಿಕೆಟ್ ಪಂದ್ಯದ ಟಿಕೇಟ್ ದರಗಳನ್ನು ಇಳಿಸುವುದು.

ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಇದೇ ತಿಂಗಳ ನಾಲ್ಕನೇ ತಾರೀಖು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಷ್ಯಾ ಕಪ್ ಅಂತಿಮ ಕ್ರಿಕೆಟ್ ಪಂದ್ಯ ನಡೆಯಲಿದೆ. ಈಗಾಗಲೇ ಕ್ರಿಕೆಟ್ ಸಂಸ್ಥೆಯವರು ಪ್ರವೇಶದರಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಣೆ

ಮಾಡಿದ್ದಾರೆ. ಆದರೆ ಈ ದರಗಳು ಬಹಳ ದುಭಾರಿಯಾಗಿದೆ. ಈ ಹಿಂದೆ ನೂರು ಇದ್ದ ದರವನ್ನು ಈಗ ಇನ್ನೂರು ರೂಪಾಯಿ ಮಾಡಿದ್ದಾರೆ. ಹೀಗೆ ಎಲ್ಲಾ ದರ್ಜೆಯ ದರಗಳನ್ನು ಒಂದಕ್ಕೆ ಎರಡರಷ್ಟು ಜಾಸ್ತಿಮಾಡಿದ್ದಾರೆ. ಅತಿ ಕಡಿಮೆ ಬೆಲೆಯ ಕುರ್ಚಿ ಎಂದರೆ ಆರನೂರು ರೂಪಾಯಿ. ಗರಿಷ್ಠವೆಂದರೆ ಮೂರು ಸಾವಿರ. ಇದು ಸಾಮಾನ್ಯ ಜನರಿಗೆ ತಲುಪತಕ್ಕದಲ್ಲ. ಅಲ್ಲಿ ಐವತ್ತು ಸಾವಿರ ಜನರು ಕುಳಿತುಕೊಳ್ಳಲು ಅವಕಾಶವಿದೆ. ಈಗಾಗಲೇ ಹದಿನೈದು ಸಾವಿರ ಟಿಕೇಟ್‌ಗಳನ್ನು ಮಾರಾಟಮಾಡಿದ್ದಾರೆ. ಇನ್ನು ಮೂವತ್ತೈದು ಸಾವಿರ ಟಿಕೇಟ್‌ಗಳನ್ನು ಮಾರಾಟಮಾಡಬೇಕಾಗಿದೆ. ಮೊದಲಾಗಿದ್ದರೆ ಕ್ರೀಡಾಂಗಣವನ್ನು ವಿಸ್ತರಿಸಬೇಕಾಗಿತ್ತು. ಕಟ್ಟಡಗಳನ್ನು ಕಟ್ಟಬೇಕಾಗಿತ್ತು ಆ ದೃಷ್ಟಿಯಿಂದ ದರವನ್ನು ಹೆಚ್ಚು ಮಾಡುತ್ತಿದ್ದರು. ಆದರೆ ಅಲ್ಲಿ ಈಗ ಎಲ್ಲಾ ವ್ಯವಸ್ಥೆಗಳು ಇದೆ. ಮತ್ತು ಪ್ರತಿ ತಿಂಗಳು ಐದು ಲಕ್ಷ ರೂಪಾಯಿ ಬಾಡಿಗೆ ಬರುವ ವ್ಯವಸ್ಥೆ ಈಗಾಗಲೇ ಇದೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ದರವನ್ನು ಕಡಿಮೆ ಮಾಡಿ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸಿಕೊಡುವುದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿದಂತಾಗುತ್ತದೆ. ಆದರೆ ಅದನ್ನು ಬಿಟ್ಟು ಕೇವಲ ಶ್ರೀಮಂತರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲವು ಬಾಕ್ಸ್‌ಗಳನ್ನು ಹಾಕಿದ್ದಾರೆ. ಕೆಲವರಿಗೆ ಸೀಮಿತವಾದ ಕುರ್ಚಿಗಳನ್ನು ಹಾಕಿ ಅದರಿಂದ ಲಕ್ಷಾಂತರ ರೂಪಾಯಿಗಳು ಬರುವ ವ್ಯವಸ್ಥೆ ಮಾಡಿದ್ದಾರೆ.

1.10 ಪಿ.ಎಂ.

ಟಿಕೇಟ್ ದರಗಳ ದೃಷ್ಟಿಯಿಂದ ನೋಡಿದಾಗ ಕ್ರಿಕೆಟ್ ಆಟ ಬಡವರ, ಜನಸಾಮಾನ್ಯರ ಆಟವಾಗದೇ ಅದು ಕೇವಲ ಶ್ರೀಮಂತರ ಆಟವೇನೋ ಎಂದು ಭಾವಿಸುವಂತಾಗಿದೆ. ಸುಮಾರು 40 ವರ್ಷಗಳಿಂದ ಶ್ರೀ ಜೆ.ಬಿ. ಮಲ್ಲಾರಾಧ್ಯ, ಶ್ರೀ ಚಿನ್ನಸ್ವಾಮಿ, ಶ್ರೀ ಸಿ.ನಾಗರಾಜ್, ಶ್ರೀ ಅಯ್ಯಪ್ಪ, ಶ್ರೀ ಶ್ರೀನಿವಾಸನ್ ಮತ್ತು ಶ್ರೀ ತಿಮ್ಮಪ್ಪಯ್ಯ ಮುಂತಾದ ಮಹನೀಯರ ಶ್ರಮದ ಫಲವಾಗಿ ಇವತ್ತು ಇದು ಒಂದು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಸಂಸ್ಥೆ ಒಳ್ಳೆಯ ಹೆಸರು ಮತ್ತು ಕೀರ್ತಿ ಪಡೆದಿದೆ. ಇವರಲ್ಲೇನು ಅನುಮಾನವಿಲ್ಲ. ಆದರೆ ಈ ರೀತಿಯಾಗಿ ಟಿಕೆಟ್ ದರಹನ್ನು ದುಬಾರಿಯಾಗಿ ಇಟ್ಟಿರತಕ್ಕದ್ದು ಸರಿಯಲ್ಲ. ಟಿಕೆಟ್ ದರಕ್ಕೆ ಏನಾದರೂ ಕಡಿಮಾಣ ಹಾಕುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? ಆ ದಿಸೆಯಲ್ಲಿ ಚಿಂತನೆ ಮಾಡಿದೆಯೇ? ಎಂಬ ಬಗ್ಗೆ ತಿಳಿಸಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಒಂದು ಸ್ವಾಯತ್ತ ಸಂಸ್ಥೆ. ಅದು ರಿಜಿಸ್ಟಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಅಡಿಯಲ್ಲಿ ನೋಂದಾಯಿತವಾದಂತಹ ಸಂಸ್ಥೆ. ಜನ ಸಾಮಾನ್ಯರಿಗೆ ಕೈಗೆ ಎಟಕುವಂತಹ ರೀತಿಯಲ್ಲಿ ಟಿಕೆಟ್ ದರವನ್ನು ನಿಗದಿ ಮಾಡುವಂತೆ ಅವರಿಗೆ ಸರ್ಕಾರ ಸೂಚನೆ ನೀಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರೆ ಸರ್ಕಾರ ಈ ವಿಚಾರದಲ್ಲಿ ಮಧ್ಯ ಪ್ರವೇಶಿಸಿ, ಅವರು ಇಂತಿಷ್ಟೇ ದರವನ್ನು ನಿಗದಿಮಾಡಬೇಕೆಂದು ಸೂಚನೆ ನೀಡುವುದು ಸಾಧ್ಯವೋ, ಸರ್ಕಾರಕ್ಕೆ ಆ ಅಧಿಕಾರ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರ ಜೊತೆಗೆ ನಾನು ಚರ್ಚೆ ಮಾಡಿ ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಸಂಜೆಯೊಳಗಾಗಿ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಪ್ರಶ್ನೆ ಇರುವುದು ಏನೆಂದರೆ, ಆ ಟಿಕೆಟ್ ಮೇಲೆ ಮನರಂಜನಾ ತೆರಿಗೆ ಕೂಡ ಹಾಕಿದ್ದಾರೆ. ತೆರಿಗೆ ಹಾಕಬಾರದು ಎಂದು ವಾದ ಮಾಡುವುದು ನಾನು, ಆ ವಿಷಯ ಬೇರೆ. ಆದರೆ ಈ ರೀತಿಯಾಗಿ ಟಿಕೆಟ್ ದರ ಜಾಸ್ತಿ ನಿಗದಿಪಡಿಸಿದಾಗ ಸರ್ಕಾರಕ್ಕೆ ಬರುವ ವರಮಾನ ಕೂಡ ಕಡಿಮೆಯಾಗುತ್ತದೆ. ಇದು ಅತ್ಯಂತ ಪ್ರಾಮುಖ್ಯವಾದಂತಹ ಪ್ರಶ್ನೆ. ನನ್ನ ಪ್ರಕಾರ ಟಿಕೆಟ್‌ವೊಂದಕ್ಕೆ 100ರೂ. ದರ ನಿಗದಿ ಮಾಡುವುದೇ ಜಾಸ್ತಿ. ಅದರ ಜೊತೆಗೆ ಈಗ ಕಾಳಸಂತೆಯಲ್ಲಿ ಕೂಡ ಕ್ರಿಕೆಟ್ ಪಂದ್ಯದ ಟಿಕೆಟ್‌ಗಳು ಮಾರಾಟ ಆಗುತ್ತಿವೆ. 200ರೂ. ಮೌಲ್ಯದ ಟಿಕೆಟ್‌ಗಳು 1000ರೂ.ಗಳವರೆಗೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ. ಅದು ಸ್ವಾಯತ್ತ ಸಂಸ್ಥೆ ಆಗಿದ್ದರೂ ಸಹ ಸರ್ಕಾರ ಸದರಿ ಕ್ರೀಡಾಂಗಣಕ್ಕೆ ಜಾಗವನ್ನು ಕೊಟ್ಟಿದೆ. ಆ ಕಾಲದಲ್ಲಿ ಮಾನ್ಯ ಎಸ್.ನಿಜಲಿಂಗಪ್ಪನವರು ಮಾನ್ಯ ಕೃಷ್ಣಾ ಮೆನನ್‌ರವರ ಜೊತೆಯಲ್ಲಿ ಹೋರಾಟ ಮಾಡಿ ರಕ್ಷಣಾ ಖಾತೆಗೆ ಸೇರಿದ್ದ ಜಾಗವನ್ನು ಕ್ರೀಡಾಂಗಣಕ್ಕಾಗಿ ಕೊಡಿಸಿಕೊಟ್ಟರು. ಶ್ರೀ ಚಿನ್ನಸ್ವಾಮಿಯವರು ನಿಜವಾಗಿಯೂ ಅತ್ಯಂತ ಒಳ್ಳೆಯ ಕೆಲಸವನ್ನು ಅಲ್ಲಿ ಮಾಡಿದ್ದಾರೆ, ಆದ್ದರಿಂದಲೇ ಆ ಕ್ರೀಡಾಂಗಣಕ್ಕೆ 'ಚಿನ್ನಸ್ವಾಮಿ ಕ್ರೀಡಾಂಗಣ' ಎಂದು ಹೆಸರಿಟ್ಟು ಅವರನ್ನು ಗೌರವಿಸಲಾಗಿದೆ. ಆ ಕಾಲದಿಂದಲೂ ಶ್ರೀ ಶ್ರೀನಿವಾಸನ್‌ರವರು, ಶ್ರೀ ಜೆ.ಡಿ. ಮಲ್ಲಾರಾಧ್ಯರವರು, ಶ್ರೀ ಸಿ. ನಾಗರಾಜ್‌ರವರು ಹಾಗೂ ಇತರರು ಒಳ್ಳೆಯ ಸಂಘಟನೆ ಮಾಡಿ ಕ್ರೀಡಾಂಗಣದ ಉನ್ನತಿಗಾಗಿ ದುಡಿದಿದ್ದಾರೆ. ಆ ಒಂದು ಸಂಸ್ಥೆ ಉಳಿಯಬೇಕು ಮತ್ತು ಬೆಳೆಯಬೇಕು. ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಂತಹ ಕೋಟ್ಯಾಂತರ ರೂ.ಗಳ ಬೆಳೆಬಾಳುವ ಆಸ್ತಿ ಮಾಡಿಕೊಂಡಿರುವಾಗ ಈ ಟಿಕೆಟ್‌ನ ದರವನ್ನು ಯಾವ ಉದ್ದೇಶಕ್ಕಾಗಿ ಜಾಸ್ತಿ ನಿಗದಿಪಡಿಸಿದೆಯೋ ನನಗೆ ಗೊತ್ತಿಲ್ಲ. 50 ಸಾವಿರ ಜನ ಸೇರಲು ಅವಕಾಶವಿರುವ ಈ ಕ್ರೀಡಾಂಗಣದಲ್ಲಿ ನಡೆಯುವ ಕ್ರಿಕೆಟ್ ಪಂದ್ಯದ ಟಿಕೆಟ್ ದರ 100 ರೂ.ಗಳಿಗಿಂತ ಕಡಿಮೆ ಇರಬೇಕೇ ವಿನಃ ಅದಕ್ಕಿಂತ ಜಾಸ್ತಿ ಇರಬಾರದು ಎಂಬುದು ನನ್ನ ಒಟ್ಟಾರೆ ಅಭಿಪ್ರಾಯವಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ವ್ಯಕ್ತ ಪಡಿಸಿರುವ ಕಳಕಳಿಗೆ ಸರ್ಕಾರವೂ ಕೂಡ ತನ್ನ ಸಹಮತಿ ವ್ಯಕ್ತಪಡಿಸುತ್ತದೆ. ಜನ-ಸಾಮಾನ್ಯರ ಕೈಗೆ ಎಟುಕದ ರೀತಿಯಲ್ಲಿ ದುಬಾರಿಯಾಗಿ ಟಿಕೆಟ್ ದರವನ್ನು ನಿಗದಿ ಪಡಿಸಬೇಕಾದಂತಹ ಅಗತ್ಯ ಇಲ್ಲ. ಸರ್ಕಾರ ಸಂಸ್ಥೆಗೆ ಅನೇಕ ರೀತಿಯ ಸವಲತ್ತುಗಳನ್ನು ನೀಡಿದೆ. ಅಲ್ಲಿ ಕ್ರಿಕೆಟ್ ಪಂದ್ಯ ನಡೆದಾಗ ಅಲ್ಲಿಯ ಪೋಲಿಸ್ ವ್ಯವಸ್ಥೆಯನ್ನು ಸರ್ಕಾರವೇ ಮಾಡುತ್ತದೆ. ಬಡವರಿಗೆ ಅನಾನುಕೂಲವಾಗುವ ರೀತಿಯಲ್ಲಿ ಟಿಕೆಟ್ ದರ ನಿಗದಿ ಪಡಿಸಿರುವ ಬಗ್ಗೆ ಸರ್ಕಾರ ಕಾನೂನಿನ ಪ್ರಕಾರ ಮಧ್ಯಪ್ರವೇಶ ಮಾಡುವುದಕ್ಕೆ ಅಧಿಕಾರ ಇದೆಯೋ ಇಲ್ಲವೋ ಎಂಬ ವಿಚಾರವನ್ನು ಕೂಡ ನೋಡಬೇಕಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ನಾನು ಸಂಬಂಧಪಟ್ಟ ಮಂತ್ರಿಗಳ ಹಾಗೂ ಇಲಾಖಾಧಿಕಾರಿಗಳ ಜೊತೆಗೆ ಮಾತನಾಡಿ ಟಿಕೆಟ್ ದರ ಕಡಿಮೆ ಮಾಡಲು ಆದೇಶ ನೀಡುವ ಸಾಧ್ಯತೆ ಇದ್ದರೆ ಆ ರೀತಿಯ ಆದೇಶವನ್ನು ಕೊಡುತ್ತೇನೆ. ಇಲ್ಲದಿದ್ದರೆ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಟಿಕೆಟ್ ದರ ಕಡಿಮೆ ಮಾಡಬೇಕೆಂದು ನಾನು ಸಂಸ್ಥೆಯ ಸಂಬಂಧಪಟ್ಟ ಪದಾಧಿಕಾರಿಗಳಲ್ಲಿ ಈ ಸದನದ ಮೂಲಕ ಗಮನ ಸೆಳೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಯಾರಿಂದ ಉತ್ತರ ಕೊಡಿಸುತ್ತೀರಿ ಎಂದು ನನಗೆ ಅರ್ಥವಾಗಲಿಲ್ಲ. ಸರ್ಕಾರ ಕ್ರಿಕೆಟ್ ಸಂಸ್ಥೆಗೆ ಕ್ರೀಂಡಾಗಣದ ಜಾಗವನ್ನು ಕೊಟ್ಟಿದೆ ಹಾಗೂ ಇನ್ನಿತರ ಸವಲತ್ತುಗಳನ್ನೂ ಕೂಡ ಕೊಟ್ಟಿದೆ. ನಾನು ಆ ಸಂಸ್ಥೆ ಬಗ್ಗೆ ಕೆಟ್ಟದಾಗಿ ಆಪಾದನೆ ಏನೂ ಮಾಡುತ್ತಿಲ್ಲ. ವೈಯುಕ್ತಿಕವಾಗಿ ನನ್ನ ಅಭಿಪ್ರಾಯವೇನೆಂದರೆ, ಕ್ರಿಕೆಟ್ ಜನಸಾಮಾನ್ಯರ ಆಟವೇ ಹೊರತು ಶ್ರೀಮಂತರ ಆಟವಲ್ಲ. ಆದ್ದರಿಂದ ಸರ್ಕಾರ ಕೂಡಲೇ ಈ ದಿಸೆಯಲ್ಲಿ ಕ್ರಮ ತೆಗೆದುಕೊಂಡು ಈ ಸಮಸ್ಯೆಗೆ ಪರಿಹಾರ ಒದಗಿಸುವುದು ಒಳ್ಳೆಯದು ಎಂಬುದು ನನ್ನ ಪ್ರಾಮಾಣಿಕವಾದ ಚಿಂತನೆಯಾಗಿದೆ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ನಾನು ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರ ಜೊತೆಗೆ ಮಾತನಾಡಿ ಸಂಜೆಯೊಳಗಾಗಿ ಇದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

6. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1999 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿದೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ವಿ.ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರ ಬೆಳೆಯುತ್ತಿರುವ ನಗರ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸುಮಾರು ಒಡಾವಣೆಗಳನ್ನು ಮಾಡುವ ಉದ್ದೇಶದಿಂದ ಹಲವಾರು ಕಡೆಗಳಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡಿತ್ತು. ಕೆಲವು ಕಡೆ ಹಾಗೆ ಸ್ವಾಧೀನ ಪಡಿಸಿಕೊಂಡಂತಹ ಜಮೀನುಗಳಲ್ಲಿ ಲೇಔಟ್‌ಗಳನ್ನು ರಚಿಸದೇ ಹಾಗೆಯೇ ಬಿಡಲಾಗಿತ್ತು. ಅಂತಹ ಜಾಗಗಳಲ್ಲಿ ಬಹುತೇಕ ಖಾಸಗಿ ವ್ಯಕ್ತಿಗಳು ರೆವಿನ್ಯೂ ಪ್ಯಾಕೆಟ್‌ನ ಮನೆಗಳನ್ನು ಕಟ್ಟಿಕೊಂಡು ಸುಮಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 1994ರಲ್ಲಿ ಸನ್ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿದ್ದುಪಡಿಯನ್ನು ತಂದು 38(ಸಿ) ಎಂಬ ಸೆಕ್ಷನ್ ಅನ್ನು ಹೊಸದಾಗಿ ಸೇರಿಸಿ, 1986ಕ್ಕೆ ಹಿಂದೆ ಯಾರ್ಯಾರು ಈ ರೀತಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೋ ಅಂತಹ ಮನೆಗಳಿಗೆ ಖಾತೆ ಕಂದಾಯಗಳನ್ನು ಮಾಡುವುದಕ್ಕೆ ರೀ-ಕನ್‌ವೇ ಮಾಡಬಹುದು ಎಂದು ಮಾಡಲಾಯಿತು. 42 ಲೇಔಟ್‌ಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡವರು ಎಂದು ಗುರುತಿಸಲಾದ 31,961 ಕೇಸ್‌ಗಳಲ್ಲಿ 15,050 ಕೇಸ್‌ಗಳು ಮಾತ್ರ ಆಗ ಡಿಸ್ಪೋಸಲ್ ಆದವು. ಈ ತಿದ್ದುಪಡಿ ವಿಧೇಯಕ ತಂದಂತಹ ಸಂದರ್ಭದಲ್ಲಿ 1986ಕ್ಕೆ ಹಿಂದೆ ಮನೆಗಳನ್ನು ಆ ರೀತಿ ಕಟ್ಟಿಕೊಂಡವರಿಗೆ ಮಾತ್ರ ಇದು ಅನ್ವಯವಾಯಿತು. ಉಳಿದವುಗಳಿಗೆ ಅದು ಅನ್ವಯವಾಗಿರಲಿಲ್ಲ. ಇದರಿಂದಾಗಿ ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಕ್ಕೈರ್ ಮಾಡಿಕೊಂಡಿದ್ದರೂ ಕೂಡ ಆ ಜಾಗದಲ್ಲಿ ಬೇರೆ ಖಾಸಗಿ ವ್ಯಕ್ತಿಗಳು ಲೇಔಟ್ ರಚಿಸಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ